# ಬೆಲೆ ಮುನ್ಸೂಚನೆಗೆ ಶೀಘ್ರ ಒಪ್ಪಂದ

ಉನ್ನತ ಮಟ್ಟದ ತಂತ್ರಜ್ಞಾನದ ನೆರವು

ಸರಕಾರ ಮಾರುಕಟ್ಟೆ ಮಧ್ಯಪ್ರವೇಶಿಸಲು ಅನುಕೂಲ

ಧಾರಣೆ ಕುರಿತ ಮುನ್ಸೂಚನೆ ಸಿಗುವುದರಿಂದ ರೈತರಿಗೆ ಪ್ರಯೋಜನ

ಧಾನ್ಯ ಸಂಗ್ರಹಿಸಿಟ್ಟುಕೊಂಡು ಬೆಲೆ ಸಿಕ್ಕಾಗ ಮಾರಲು ಅವಕಾಶ

30 ಬೆಳೆಯ ಬೆಲೆ ಮುನ್ಸೂಚನೆ, ಉತ್ಪಾದನೆ ಮುನ್ನ ಅಂದಾಜು ಲಭ್ಯ



"ಬೆಲೆ ಇಳಿಯುವ ಮುನ್ಸೂಚನೆ ಮೊದಲೇ ಸಿಕ್ಕರೆ ಸರಕಾರ ಮಧ್ಯಪ್ರವೇಶಿಸಲು, ಮುಂಜಾಗ್ರತಾ ಕ್ರಮ ಕೈಗೊಳ್ಳಲು ಸಹಕಾರಿಯಾಗುತ್ತದೆ. ಉನ್ನತ ಮಟ್ಟದ ತಂತ್ರಜ್ಞಾನಕ್ಕಾಗಿ ಮೈಕ್ರೋಸಾಫ್ಟ್ ಜತೆ ಶೀಘ್ರ ಒಪ್ಪಂದ ಮಾಡಿಕೊಳ್ಳಲಾಗುವುದು. ಬೆಳೆಗಳ ಉತ್ಪಾದನೆ ಬಗ್ಗೆಯೂ ಅಂದಾಜು ಮಾಡಲಾಗುವುದು.

-**ಪ್ರಕಾಶ್ ಕಮ್ಮರಡಿ** ಅಧ್ಯಕ್ಷ, ಕೃಷಿ ಬೆಲೆ ಆಯೋಗ

■ ಸಿದ್ದು ಚಿಕ್ಕಬಳ್ಳೇಕೆರೆ ಬೆಂಗಳೂರು

ಯಾವ ಬೆಳೆಗೆ ಯಾವ ಸಮಯದಲ್ಲಿ ಉತ್ತಮ ಧಾರಣೆ ಸಿಗಲಿದೆ ಎಂದು ತಿಳಿಯದೇ ಕಂಗಾಲಾಗಿದ್ದ ರೈತರಿಗೆ ಇಲ್ಲಿದೆ ಸಂತಸದ ಸುದ್ದಿ. ಬೆಲೆ ಸಿಗುವ ನಿಖರ ಸಮಯ ಗೊತ್ತಾಗುವುದರಿಂದ ಆತಂಕಪಡುವ ಅವಶ್ಯಕತೆಯಿಲ್ಲ.

ಬೆಲೆ ಮುನ್ಸೂಚನೆ ಮತ್ತು ಉತ್ಪಾದನೆ ಮುನ್ನ ಅಂದಾಜು ಮಾಡಲು ಮೈಕ್ರೋಸಾಫ್ಟ್ ಕಂಪನಿ ಜತೆ ಶೀಘ್ರದಲ್ಲೇ ಒಪ್ಪಂದ ಮಾಡಿಕೊಳ್ಳಲು ಕೃಷಿ ಬೆಲೆ ಆಯೋಗ ಮುಂದಾಗಿದ್ದು ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವುದರಿಂದ ಕಟಾವಿನ ನಂತರ 3 ತಿಂಗಳೊಳಗೆ ಬೆಲೆ ಹೆಚ್ಚಳವಾಗುತ್ತೋ, ಇಲ್ಲವೋ ಎಂಬುದು ಮೊದಲೇ ಗಮನಕ್ಕೆ ಬರಲಿದೆ.

ಕಳೆದ ವರ್ಷ ಆಯೋಗವು ಪ್ರಾಯೋಗಿಕವಾಗಿ 24 ಬೆಳೆಗಳ ಬೆಲೆ ಮುನ್ಸೂಚನೆ ನೀಡಿತ್ತಾದರೂ ಅದು ರಾಜ್ಯಾದ್ಯಂತ ನಿಗದಿತ ದರವಾಗಿತ್ತು. ಇದರಿಂದ ಜಿಲ್ಲಾವಾರು ಬೆಲೆಯಲ್ಲಿ ವ್ಯತ್ಯಾಸವಾಗಿತ್ತು. ಆದರೆ ಈ ಬಾರಿ 30 ಬೆಳೆಗೆ ಪ್ರಮುಖ ಮಾರಾಟ ಕೇಂದ್ರಗಳ ದರ ನೀಡುವುದರಿಂದ ನಿಖರತೆ ಸಿಗಲಿದೆ.

**ದೇಶದಲ್ಲೇ ಮೊದಲು:** ಈ ರೀತಿ ಬೆಲೆ ಮುನ್ಸೂಚನೆ ನೀಡುವ ವ್ಯವಸ್ಥೆ ದೇಶದ ಯಾವ ರಾಜ್ಯದಲ್ಲೂ ಇಲ್ಲ. ಇದು ಕರ್ನಾಟಕದ ಹೆಗ್ಗಳಿಕೆಯಾಗಿದೆ. ಆಗಸ್ಟ್-ಸೆಪ್ಟೆಂಬರ್ ವೇಳೆಗೆ ನೂತನ ಸಾಫ್ಟ್‌ವೇರ್ ಬಳಕೆಗೆ ಲಭ್ಯವಾಗಲಿದೆ. ಆವಕ, ಮಾರಾಟ, ಬೆಲೆ ಬಗ್ಗೆ ಸ್ವಯಂಚಾಲಿತ ಡ್ಯಾಶ್ ಬೋರ್ಡ್ ಮಾಹಿತಿ ನೀಡಲಿದೆ.

ರಾಜ್ಯದ ಪ್ರಮುಖ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಧಾರಣೆಯನ್ನು ದೇಶ-ವಿದೇಶಗಳ ಉತ್ಪಾದನಾ ಪರಿಸ್ಥಿತಿ, ರಾಜ್ಯದ ಅತಿವೃಷ್ಟಿ ಮತ್ತು ಅನಾವೃಷ್ಟಿ, ಮಾರುಕಟ್ಟೆಗಳ ಆವಕ ಮುಂತಾದವುಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಲಾಗುವುದು.

**ಎಪಿಎಂಸಿ ದತ್ತಾಂಶ ಸಂಗ್ರಹ:** ಕೃಷಿ, ತೋಟಗಾರಿಕೆ, ಮಾರುಕಟ್ಟೆ, ಆಹಾರ ಮತ್ತು ನಾಗರಿಕ ಸರಬರಾಜು ಸೇರಿದಂತೆ ಹಲವು ಇಲಾಖೆಗಳು ಈ ದತ್ತಾಂಶ ಬಳಸಿಕೊಂಡು ನೀತಿ ನಿರೂಪಣೆ ಮಾಡಲು ಸಹಕಾರಿಯಾಗುತ್ತದೆ.

ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿರುವ ಹತ್ತಾರು ವರ್ಷದ ಅಂಕಿ-ಸಂಖ್ಯೆಗಳನ್ನು ಕಲೆ ಹಾಕಿ ಯಾವ ಧಾನ್ಯ ಎಷ್ಟು ಪ್ರಮಾಣದಲ್ಲಿ ಆವಕವಾಗಿದೆ ? ಧಾರಣೆ ಎಷ್ಟಿತ್ತು ? ಮುಂತಾದ ಮಾಹಿತಿಗಳನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಕೃಷಿ ಬೆಲೆ ಆಯೋಗ ಕಾರ್ಯೋನ್ಮುಖವಾಗಿದೆ.

**ಏನು ಅನುಕೂಲ?:** ಮೊದಲೇ ಮುನ್ಸೂಚನಾ ಬೆಲೆ ತಿಳಿದರೆ ಸರಕಾರ ಮಾರುಕಟ್ಟೆ ಮಧ್ಯಪ್ರವೇಶ ಮಾಡಿ ಪ್ರೋತ್ಸಾಹಧನ, ಸಹಾಯ ಧನ ನೀಡಿ ರೈತರಿಗೆ ನೆರವಾಗಲು ಇದು ಸಹಕಾರಿಯಾಗುತ್ತದೆ. ರೈತರೂ ಸಹ ಯಾವ ಸಮಯದಲ್ಲಿ ಧಾರಣೆ ಸಿಗಲಿದೆ ಎಂಬುದನ್ನು ಮೊದಲೇ ಅರಿಯುವುದರಿಂದ ಸಂಗ್ರಹಿಸಿಟ್ಟುಕೊಳ್ಳಲೂ ಅನುಕೂಲವಾಗುತ್ತದೆ.

### ಯಾವ್ಯಾವ ಬೆಳೆಗೆ ಬೆಲೆ ನಿಗದಿ?

| | |
|---|---|
| ಏಕದಳ ಧಾನ್ಯ | ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ |
| ದ್ವಿದಳ ಧಾನ್ಯ | ತೊಗರಿ, ಕಡಲೆ, ಉದ್ದು, ಹೆಸರು |
| ಎಣ್ಣೆಕಾಳು | ಶೇಂಗಾ, ಸೋಯಾ ಅವರೆ, ಸೂರ್ಯಕಾಂತಿ |
| ವಾಣಿಜ್ಯ ಬೆಳೆ | ಹತ್ತಿ, ಒಣ ಮೆಣಸಿನಕಾಯಿ |
| ತರಕಾರಿ | ಟೊಮೆಟೋ, ಈರುಳ್ಳಿ, ಆಲೂಗಡ್ಡೆ |
| ಹಣ್ಣಿನ ಬೆಳೆ | ಬಾಳೆ, ದ್ರಾಕ್ಷಿ, ದಾಳಿಂಬೆ |
| ತೋಟದ ಬೆಳೆ | ತೆಂಗು, ಕೊಬ್ಬರಿ, ಅಡಕೆ |
| ಸಾಂಬಾರ ಪದಾರ್ಥ | ಹುಣಸೆ, ಅರಿಶಿನ, ಕರಿಮೆಣಸು |

# ನಿಜಕ್ಕೂ ಎಸ್ಸೆಂ ಕೃ… ಕಾಂಗ್ರೆಸ್ ಬಿಟ್ಟಿದ್ದೇ…

← ಮೊದಲ ಪುಟದಿಂದ

'ರಾಜ್ಯದಲ್ಲಿರುವ ಕಾಂಗ್ರೆಸ್ ಸರಕಾರ ಸಂಪೂರ್ಣವಾಗಿ ತನ್ನ ವರ್ಚಸ್ಸನ್ನು ಕಳೆದುಕೊಂಡಿದೆ. ಸಿದ್ದರಾಮಯ್ಯ ಅವರನ್ನು ಇನ್ನಷ್ಟು ದಿನಗಳ ಕಾಲ ಅಧಿಕಾರದಲ್ಲಿ ಮುಂದುವರಿಸಿದರೆ ಮತ್ತೊಂದು ಅವಧಿಗೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಎಲ್ಲ ದೃಷ್ಟಿಯಿಂದಲೂ ಕರ್ನಾಟಕ ಕಾಂಗ್ರೆಸ್ ಪಾಲಿಗೆ ಪೊಟೆನ್ಷಿಯಲ್ ಸ್ಟೇಟ್. ಹೀಗಾಗಿ ನನ್ನನ್ನು ಮತ್ತೊಂದು ಅವಧಿಗೆ ಮುಖ್ಯಮಂತ್ರಿಯಾಗಿ ಮಾಡಿ. 2018ರ ಚುನಾವಣೆಯಲ್ಲಿ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರುತ್ತೇನೆ' ಎಂದು ತಮ್ಮ ಮನದಾಳದ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಆದರೆ ರಾಹುಲ್ ಗಾಂಧಿ ಅವರಿಂದ ಇದಕ್ಕೆ ಪ್ರತಿಕ್ರಿಯೆ ಲಭಿಸುವ ಬದಲು ಕೃಷ್ಣ ಅವರ ಹಿರಿತನಕ್ಕೆ ಅವಮಾನವಾಗುವಂತ ವ್ಯಂಗ್ಯೋಕ್ತಿ ವ್ಯಕ್ತವಾಗಿತ್ತು.

ಅದರೂ ಛಲ ಬಿಡದ ಕೃಷ್ಣ ಸೋನಿಯಾ ಗಾಂಧಿ ಅವರ ರಾಜಕೀಯ ಕಾರ್ಯದರ್ಶಿ ಅಹ್ಮದ್ ಪಟೇಲ್ ಅವರನ್ನು ಭೇಟಿ ಮಾಡಿ ತಮ್ಮ ಯೋಜನೆಯ ಸಾಧಕ-ಬಾಧಕಗಳ ಬಗ್ಗೆ ವಿಶ್ಲೇಷಣೆ ನಡೆಸಿದ್ದರು. ಅಲ್ಲಿಯೂ ಅವರಿಗೆ ನೀರಸ ಪ್ರತಿಕ್ರಿಯೆ ಲಭಿಸಿತ್ತು. ತಮ್ಮನ್ನು ರಾಜ್ಯಸಭೆಗೆ ಕಳುಹಿಸದೇ ಅವಮಾನ ಮಾಡಿದ ಹೈಕಮಾಂಡ್, ಕೊನೆಗೆ